'ಅವರ ತಂದೆ ತಾಯಿ ಕಾರ್ಯ ಆದ ಮೇಲೆ ಒಂದು ಸಾರಿ ಯಾರಿಗೂ ಹೇಳದೆ ಚೇತನಾ ಲೇಔಟ್ ಆಚೆಗೆ, ಅವರ ಫ್ರೆಂಡ್, ಒಂದು ದೊಡ್ಡ ಜಾಗದಲ್ಲಿ ವಯಸ್ಸಾದವರಿಗೆ ಚಿಕ್ಕ ಚಿಕ್ಕ ಮನೆ ತರ ಪ್ರಾಜೆಕ್ಟ್ ಮಾಡಿದ್ದಾರೆ. ಆ ಪ್ರಾಜೆಕ್ಟ್ ಅರ್ಧಕ್ಕೆ ನಿಂತೋಗಿದೆ. ಆದರೆ ಅಲ್ಲಿ ಅವರ ಒಂದು ಒಳ್ಳೆ ಗೆಸ್ಟ್ ಹೌಸ್ ಇದೆ. ಅಲ್ಲಿ ಎಲ್ಲ ಸೌಕರ್ಯ ಇದೆ. ಅದರ ಒಂದು ಕೀ ಇವರ ಹತ್ರನೂ ಇರುತ್ತೆ. ಅಲ್ಲಿ ಹೋಗಿ ಮೂರು ದಿನ ಇದ್ದರು'.

'ಭುಜಂಗ, ಇವರ ಜೊತೆ ಅಲ್ಲಿ ಹೋಗಿ ನೋಡಿ, ಇದ್ದರೆ ಸಾಹೇಬರನ್ನ ಕರೆದುಕೊಂಡು ಬನ್ನಿ. ಬೆಂಜ್ ಕಾರಲ್ಲಿ ಯಾವತ್ತೂ ಕುಂತಿಲ್ಲ ಅಂತಿದ್ರಲ್ಲ, ಬರಬೇಕಾದರೆ ಬೆಂಜ್ ಕಾರಲ್ಲೇ ಬನ್ನಿ ಏನು'.

'ಯೆಸ್ ಸಾರ್'.

ಭುಜಂಗ ಮತ್ತು ಮುರುಗನ್ ತೆರಳಿದ ನಂತರ ವಿನಯ್ ಬಂದ.

'ಸಾರ್, ಚಂದ್ರನ್ ಹೇಳಿರೊ ಎಲ್ಲಾ ಪಾಯಿಂಟ್ಸ್, ಟೈಮು, ಲೊಕೇಷನನ್ನು ಮ್ಯಾಚ್ ಆಗುತ್ತೆ, ಆದರೆ...'

'ಏನು ಹೇಳಿ...'

'ಅಮ್ಮು ಅವರ ಜೊತೆನೇ ಚಂದ್ರನ್ ಕಾರಲ್ಲಿ ಬರದೇ ಎರಡು ಗಂಟೆ ಬಿಟ್ಟು ಬೆಂಗಳೂರಿಗೆ ಒಬ್ಬರೇ ಬಸ್ಸಿನಲ್ಲಿ ಬಂದಿದ್ದು, ಮತ್ತೆ ಮಡಿಕೇರಿಗೆ ಹಿಂತಿರುಗಬೇಕಾದರೆ ಅಮ್ಮು ಅವರ ಮನೆಯ ರಸ್ತೆ ಮೂಲೆ ತನಕ ಬಂದು ಅಮ್ಮು ಅವರ ಮನೆಗೆ ಹೋಗದೇ ಹಾಗೆ ವಾಪಸ್ ಹೋಗಿದ್ದು... ಈ ಎರಡೂ ಲಾಜಿಕಲ್ ಅಲ್ಲ ಅನ್ಸುತ್ತೆ ಸಾರ್...'

'ಅಮ್ಮು ಅವರ ಮನೆಗೆ ಚಂದ್ರನ್ ಹೋಗಿರಬಹುದು ಅಂತೀರಾ? ಈಗ ಚಂದ್ರನ್ ಹೊರಡೋದಕ್ಕೆ ಮುಂಚೆ ಸ್ಟೇಷನ್ನಿನ ಬಾಗಿಲಿನ ಹೊರಗೆ ನೆಲದ ಮೇಲೆ, ಕಾಟಯ್ಯನವರಿಗೆ ಒಂದೆರಡು ನ್ಯೂಸ್ ಪೇಪರ್ ಹಾಕೋದಕ್ಕೆ ಹೇಳಿದ್ದೆ... ಅವರು ಅದನ್ನ ಎತ್ತಿಟ್ಟಿದ್ದಾರೆ. ನೋಡಿ, ಏನಾದರೂ ಅದರ ಮೇಲೆ ಚಂದ್ರನ್ ಅವರ ಶೂ ಫುಟ್ ಪ್ರಿಂಟ್ ಬಿದ್ದಿದ್ಯಾ ಅಂತ...'

ಹೋಗಿ ಅದನ್ನು ನೋಡಿ ಅಲ್ಲಿಂದಲೇ, 'ಚೆನ್ನಾಗೇ ಬಿದ್ದಿದೆ ಸಾರ್...'

'ಹಾಗಾದರೆ ಆ ಶೂ ಫುಟ್ ಪ್ರಿಂಟ್ ಲ್ಯಾಬ್‌ಗೆ ಕಳಿಸಿ. ಕ್ರೈಮ್ ಸೈಟಲ್ಲಿ ಸಿಕ್ಕಿರೊ ಯಾವುದಾದರೂ ಶೂ ಫುಟ್ ಪ್ರಿಂಟ್‌ಗೆ ಮ್ಯಾಚ್ ಆಗುತ್ತಾ ನೋಡೋಣ... ಹಾಗೆಯೇ ಚಂದ್ರನ್ ಅವರ ಈ ಕಾಫಿ ಗ್ಲಾಸ್ ಮೇಲಿರೋ ಫಿಂಗರ್ ಪ್ರಿಂಟ್ಸ್ ಕೂಡ ಚೆಕ್ ಮಾಡೋಕೆ ಹೇಳಿ'.

'ಚಂದ್ರನ್, ಅಮ್ಮು ಅವರಿಗೆ ಆ ಹದಿನೈದು ಲಕ್ಷ ಕೊಟ್ಟಿರೋದಕ್ಕೆ ಸಾಕ್ಷಿ–ದಾಖಲೆ ಇಲ್ಲ, ಊರಿನ ಆಸ್ತಿ ಮಾರಿ, ತನ್ನ ಅಣ್ಣನಿಂದ ಪಡೆದುಕೊಂಡಿರೊ ಆ ಹದಿನಾರು ಲಕ್ಷಕ್ಕೆ ಸಾಕ್ಷಿ ದಾಖಲೆ ಇಲ್ಲ. ಕೇಳಿ ನೋಡೋದಕ್ಕೆ ಅವರಿಬ್ಬರೂ ಇಲ್ಲ. ಎರಡೂ ಕನೆಕ್ಟೆಡ್ ಇರಬಹುದಾ ವಿನಯ್?'

'... ಇರಬಹುದು ಸಾರ್'

ಗೊಂದಲಕ್ಕೆ ಬಿದ್ದಿದ್ದ ಮಾಯಣ್ಣ.

'ವಿನಯ್ ಆ ಡೈರೆಕ್ಟರ್ ದಿನೇಶ್ ಅವರಿಗೆ ಇವತ್ತು ಸಂಜೆ ಆರಕ್ಕೆ ಇಲ್ಲಿಗೆ ಬರುವುದಕ್ಕೆ ಹೇಳಿ'.

'ಯೆಸ್ ಸಾರ್'.

ಅಷ್ಟರಲ್ಲಿ ಒಂದು ಫೋನ್ ಕಾಲ್ ಬಂದಿತ್ತು.

'ಸಾರ್ ನಮಸ್ತೆ, ನಾನು ಯಲಹಂಕ ಲಿಮಿಟ್ಸ್ ಟ್ರಾಫಿಕ್ ಪೀಸಿ ನಿಂಗಯ್ಯ ಮಾತಾಡ್ತಿರೋದು'.

'ನಮಸ್ತೆ, ಹೇಳಿ ನಿಂಗಯ್ಯ'.

'ಸಾರ್, ನೀವು ನೋಡ್ತಿದ್ದ ಆ 'ಕೊಡಗಿನ ಕಾವೇರಿ' ಬೊಲೆರೋ ಜೀಪು ಇಲ್ಲೇ ಯಲಹಂಕ ರೈತರ ಸಂತೆ ಕಾಂಪೌಂಡೊಳಗೆ ನಿಂತಿದೆ'.

'ಗುಡ್... ದೂರದಿಂದನೇ ಎಲ್ಲಾ ಗಮನಿಸಿ... ಗಾಡೀನ ಮೂವ್ ಮಾಡೋಕೆ ಬಿಡಬೇಡಿ... ಇನ್ನಿಪ್ಪತ್ತು ನಿಮಿಷದಲ್ಲಿ ಅಲ್ಲಿರ್ತೀನಿ'.

'ಆಯ್ತು ಸಾರ್...'

ಭುಜಂಗನ ಜೊತೆ ಮಾಯಣ್ಣನ ಜೀಪ್ ಯಲಹಂಕ ರೈತರ ಸಂತೆ ಕಡೆಗೆ ದೌಡಾಯಿಸಿತು. ಮಾಯಣ್ಣನ ಜೀಪು ರೈತರ ಸಂತೆಯ ಅಂಗಳಕ್ಕೆ ಬಂದು ಒಂದು ಮರೆಯಾದ ಜಾಗದಲ್ಲಿ ನಿಂತಿತು. ಕೆಳಗಿಳಿದ ಮಾಯಣ್ಣ ಮತ್ತು ಭುಜಂಗನ ದೃಷ್ಟಿ ಆ ಜನಸಮೂಹದ ನಡುವೆ ವಿನೋದ್ ಮತ್ತು ಅವನ ಜೊತೆಗಿನ ಒಂದು ಅಪರಿಚಿತ ಮುಖವನ್ನು ಹುಡುಕಲಾರಂಭಿಸಿತು. ಆ ಸಂತೆಮಾಳ ಒಂದು ಬೃಹತ್ ಶೀಟು ಛಾವಣಿಯಡಿಯಲ್ಲಿ ಸಾಲು ಸಾಲಾಗಿ, ಮಂಡಿಮಟ್ಟಕ್ಕೆ ಎತ್ತರಿಸಿ ಕಟ್ಟಿದ ಕಲ್ಲು ಚಪ್ಪಡಿಗಳ ಜಗಲಿಗಳು. ಅದರ ಮೇಲೆ ರೈತರು ತಾವು ಬೆಳೆದು ತಂದದ್ದನ್ನು, ಗುಡ್ಡೆ ಸುರುವಿ, ನೇರವಾಗಿ ಗ್ರಾಹಕರಿಗೆ ಮಾರಲು ಮಾಡಿದ ವ್ಯವಸ್ಥೆ. ಸ್ವಲ್ಪ ಸಮಯದಲ್ಲೇ ವಿನೋದ್ ಮತ್ತು ರವಿ ಅಲ್ಲೇ ಸಂತೆಮಾಳದ ಹೊರಗೆ ಇದ್ದ ಒಂದು ಅಂಗಡಿಯಲ್ಲಿ, ಟೀ ಕುಡಿಯುತ್ತಾ ಸಿಗರೇಟು ಸೇದುತ್ತಾ ನಿಂತಿದ್ದು ಮಾಯಣ್ಣನಿಗೆ ಕಂಡಿತ್ತು. ರವಿ ಆರು ಅಡಿ ಎತ್ತರದ, ಕೋಲುಮುಖದ, ಬಿಳುಚಿಕೊಂಡಂತಹ ಬಣ್ಣದ, ಕೂದಲನ್ನು ಹಿಂದಕ್ಕೆ ಬಾಚಿದ, ತುಸು ಬಾಗಿದ ಕೃಶದೇಹಿ. ಒಂದು ಕಾಲಕ್ಕೆ ಹಾಕಿ ಆಟಗಾರನಂತೆ, ಆದರೆ ಈಗ ಚಟಗಳ ಚಾಳಿಗೆ ಜೋತುಬಿದ್ದ ಜೀವ ಜೊಳ್ಳಾಗಿತ್ತು. ಅವರ ಕಣ್ಣಿಗೆ ಬೀಳದಂತೆ ದೂರದಲ್ಲೇ ನಿಂತು ಗಮನಿಸುತ್ತಿದ್ದ ಮಾಯಣ್ಣನಿಗೆ ದಟ್ಟವಾದ ಅನುಮಾನಗಳು ಹುಟ್ಟಲು ಕಾರಣ, ಕೆಲವೊಂದು ತಾಳೆಯಾಗದ ಲೆಕ್ಕಗಳು. ಬೊಲೆರೋ ಜೀಪಿದ್ದಲ್ಲಿಗೆ ಹೋಗಿ ಗಮನಿಸಿದಾಗ, ಎಲ್ಲಾ ತರಕಾರಿಗಳನ್ನು ಹೇಗೆ ಲೆಕ್ಕ ಹಾಕಿದರೂ ಸಗಟು ದರದಲ್ಲಿ, ಒಂದು ಮೂರು ಸಾವಿರ ರೂಪಾಯಿ ದಾಟಲ್ಲ ಎನಿಸಿತ್ತು. ಅಷ್ಟನ್ನು ದಾರಿಯುದ್ದಕ್ಕೂ ಇರುವ ಎಲ್ಲಾ ಮಾರುಕಟ್ಟೆಗಳನ್ನೂ ದಾಟಿಕೊಂಡು, ಇಷ್ಟು ದೂರ ಬಂದು, ದಾರಿ ಖರ್ಚುಗಳನ್ನು ಭರಿಸಿ ಬರುವುದರ ಹಿಂದಿನ ವ್ಯಾಪಾರದ ತರ್ಕ ಅರ್ಥವಾಗಿರಲಿಲ್ಲ. ಅಷ್ಟರಲ್ಲೇ ಈರ್ವರೂ ಸಂತೆಮಾಳದ ಒಳಹೊಕ್ಕು ನೇರವಾಗಿ ಅತ್ತಿತ್ತ ತಿರುಗದೆ ಒಂದು ನಿರ್ದಿಷ್ಟ ಜಗಲಿಕಟ್ಟೆ ಮಳಿಗೆಯ ಮುಂದೆ ನಿಂತರು. ಅವರನ್ನು ಹಿಂಬಾಲಿಸಿದ ಮಾಯಣ್ಣ ಮತ್ತು ಭುಜಂಗ ಅಲ್ಲೇ ಮರೆಯಲ್ಲಿ ನಿಂತರು. ಆ ಮೂಲೆ ಮಳಿಗೆಯಲ್ಲಿ ಒಬ್ಬ ಚಿಕ್ಕ ಹುಡುಗ ಮಾತ್ರ ಇದ್ದ.

'ನಿಮ್ಮ ತಂದೆ ಇನ್ನೂ ಬಂದಿಲ್ಲವಾ?'

'ನಿಮ್ಮೆಸರು ರವಿ ತಾನೇ?'

'ಹೌದು...'

'ನಮ್ಮಮ್ಮಂಗೆ ಮೈ ಸರೀಗಿಲ್ಲ, ಅದಕ್ಕೆ ನಮ್ಮಪ್ಪ ಅಮ್ಮನ್ನ ಆಸ್ಪತ್ರೆಗೆ ಕರ್ಕೊಂಡೋಗವ್ರೆ... ಫೋನ್ ಮಾಡಿದ್ರು, ನೀವು ಸಾಯಂಕಾಲ ಬಂದ್ರೆ ಇರ್ತಾರಂತೆ'.

ಮಾಯಣ್ಣ ಒಂದು ನಿರ್ಧಾರಕ್ಕೆ ಬಂದು, 'ಭುಜಂಗ ನೀವು ವಿನೋದ್‌ನ ಟ್ರ್ಯಾಕ್ ಮಾಡಿ ನಾನು ರವೀನ ಟ್ರ್ಯಾಕ್ ಮಾಡ್ತೀನಿ'.

'ಯೆಸ್ ಸಾರ್'.

ಅವರನ್ನು ಅಡ್ಡಗಟ್ಟಿ ಭುಜಂಗನಿಗೆ ಸನ್ನೆ ಮಾಡುತ್ತಿದ್ದಂತೆ, ಅದನ್ನು ಮುಂದಾಗಿಯೇ ಗಮನಿಸಿದ ವಿನೋದ್ ಓಟ ಕೀಳಲು ಹವಣಿಸುತ್ತಿದ್ದ. ಭುಜಂಗ ಛಂಗನೆ ಹಾರಿ ಅವನ ಮೇಲೆ ಬಿದ್ದು, ನೆಲಕ್ಕೆ ಮಕಾಡೆ ಕೆಡವಿ, ಅವನ ಎರಡೂ ಕೈಗಳನ್ನು, ತನ್ನ ಕೈಗಳಿಂದ ಹಿಡಿದು ಹಿಂದಕ್ಕೆ ಅವನ ಬೆನ್ನಿಗೆ ತಿರುಗಿಸಿ, ಮಿಸುಕಾಡದಂತೆ ಅವನ ಬೆನ್ನ ಮೇಲೆ ತನ್ನ ಮಂಡಿಯಿಂದ ಒತ್ತಿಹಿಡಿದಿದ್ದ. ಇತ್ತ ರವಿ, ಥೇಟ್ ಸಿನಿಮಾಗಳಲ್ಲಿ ನಡೆಯುವಂತೆ ತರಕಾರಿ ಮುಂಗಟ್ಟು ಸಾಲುಗಳ ಮೇಲೆಯೇ ಜಿಗಿ ಜಿಗಿಯುತ್ತಾ ತಪ್ಪಿಸಿಕೊಂಡು ಓಡಲು ಮಾಯಣ್ಣನು ಅದೇ ವೇಗದಲ್ಲಿ ಬೆನ್ನಟ್ಟಿದ್ದ. ಇನ್ನೇನು ಸಿಕ್ಕಿಬಿದ್ದ ಎನ್ನುವಷ್ಟರಲ್ಲಿ, ರವಿ ಕೈಗೆ ಸಿಕ್ಕ ಒಂದು ತಕ್ಕಡಿಯನ್ನು ಎತ್ತಿ ಹಿಂದಕ್ಕೆ ತಿರುಗಿ ನೇರವಾಗಿ ಮಾಯಣ್ಣನ ಮುಖಕ್ಕೆ, ಬಲವೆಲ್ಲಾ ಬಿಟ್ಟು ರೊಯ್ಯನೆ ಎಸೆದಿದ್ದ. ಮಾಯಣ್ಣ ಅಷ್ಟೇ ವೇಗದಲ್ಲಿ ತನ್ನ ಮುಖವನ್ನು ರಕ್ಷಿಸಿಕೊಳ್ಳಲು ಕೈ ಮುಂದೆ ಮಾಡಿದಾಗ ತಕ್ಕಡಿಯ ಹರಿತವಾದ ಅಂಚು ಮೊಣಕೈನಿಂದ ಸ್ವಲ್ಪ ಮೇಲೆ ಆಳವಾದ ಗಾಯ ಮಾಡಿ ರಕ್ತ ಸುರಿಯಲಾರಂಭಿಸಿತ್ತು. ಹೀಗೆ ತಕ್ಕಡಿಯನ್ನು ಎಸೆಯುವ ಭರದಲ್ಲಿ ರವಿಯ ಓಟದ ತಗ್ಗಿದ ವೇಗದ ಲಾಭ ಪಡೆದ ಮಾಯಣ್ಣ ಒಂದೇ ನೆಗೆತಕ್ಕೆ ಹಾರಿ ರವಿಯ ಮೇಲೆ ಮುಗಿಬಿದ್ದು ಅವನನ್ನು ಹಣಿದಿದ್ದ. ಹೀಗೆ ಸಿಕ್ಕಿಬಿದ್ದ ಇಬ್ಬರನ್ನು ಮಾಯಣ್ಣ, ಜೀಪಿಗೆ ತಳ್ಳಿ ಅವರನ್ನು ಕಾಯಲು ಭುಜಂಗನನ್ನು ಹಿಂದೆಯೇ ಕೂರಿಸಿ ತಾನು ಚಾಲನೆಗೆ ಕುಳಿತ. ಅಷ್ಟರಲ್ಲಿ ಅಲ್ಲಿಗೆ ಓಡೋಡಿ ಬಂದ ಯಲಹಂಕ ಲಿಮಿಟ್ಸ್ ಟ್ರಾಫಿಕ್ ಪೀಸಿ ನಿಂಗಯ್ಯ, ರಕ್ತ ಸುರಿಯುತ್ತಿದ್ದ ಮಾಯಣ್ಣನ ಕೈ ನೋಡಿ–

'ಸಾರ್, ಇಲ್ಲೇ ಮೆಡಿಕಲ್ ಶಾಪ್ ಇದೆ. ಒಂದೇ ನಿಮಿಷ, ಒಂದು ದೊಡ್ಡ ಪ್ಲಾಸ್ಟರ್ ಹಾಕಿ ಬ್ಯಾಂಡೇಜ್ ಬಟ್ಟೆ ಸುತ್ತೋಣ ಸಾರ್. ಆಮೇಲೆ ಆಸ್ಪತ್ರೆಗೋಗಿ ಸ್ಟಿಚ್ ಆಕ್ಸಿದ್ರೆ ಆಯ್ತು'.

'ಈಗ ಸದ್ಯಕ್ಕೆ ಕರ್ಚೀಫ್ ಸುತ್ತುದ್ರೆ ಆಯ್ತು. ನೀವು ಒಂದು ಕೆಲಸ ಮಾಡಿ. ಆ ಬೊಲೆರೋ ಜೀಪ್ ಹಾಗೇ ನಮ್ಮ ಸ್ಟೇಷನ್ನಿಗೆ ಕಳುಹಿಸಿಕೊಡಿ, ಜೊತೆಗೆ ನೀವೂ ಆ ಜೀಪಲ್ಲೇ ಬನ್ನಿ. ಜಾಗ್ರತೆ, ಏನೂ ಹೆಚ್ಚು ಕಡಿಮೆ ಆಗಬಾರದು. ನಾನು ನಿಮ್ಮ ಎಸ್.ಐ.ಗೆ ಫೋನ್ ಮಾಡಿ ಹೇಳ್ತೀನಿ... ಏನು?'

'ಆಯ್ತು ಸಾರ್'.

ಜೀಪಲ್ಲಿ ಹಿಂದೆ ಕುಳಿತ ರವಿಯ ಕುರಿತು, ನಗುತ್ತಾ, 'ಏನಯ್ಯ ರವಿ, ಹೀಗಾ ಮಾಡೋದು... ನೋಡು ಎಷ್ಟು ರಕ್ತ ಹೋಗಿದೆ... ಈಗ ಭುಜಂಗ ಅವರನ್ನ ಫ್ರೀ ಬಿಟ್ಟರೆ ಅವರು ಏನು ಮಾಡಬಹುದು ಗೊತ್ತಾ?'

(ಸಶೇಷ)